ಬಾಯಿಂದ ಅಪ್ರಯತ್ನಪೂರ್ವಕವಾಗಿ ಒಂದು ಸಿಳ್ಳು ಹೊರಟಿತು. ಎರಡೂ ಕೈಗಳನ್ನು ಒಂದಕ್ಕೊಂದು ಬೆಸೆದು ನಟಿಗೆ ಮುರಿದು ಮತ್ತೊಮ್ಮೆ ಶಬ್ದ ಸಮೇತವಾಗಿ ನಾಲಗೆಯಿಂದ ತುಟಿಗಳನ್ನು ಸವರಿದ.

"ಓಹೋ... ಮಾರ್ಘಾ!! ಯಾರಿಗಮ್ಮ ಈ ಪಾಟ ಮುತ್ತಿಕ್ಕುತ್ತಿದ್ದೀಯಾ?" ಯಾರೋ ಎದುರು ಕೋಣೆಯಿಂದ ಕೇಳುತ್ತಾ ಅಡುಗೆ ಕೋಣೆಯ ಬಾಗಿಲ ಬಳಿ ಬಂದು ನಿಂತರು.

ಅಹಿನಿವ್ ಬಾಗಿಲೆಡೆಗೆ ಕಣ್ಣು ಹಾಯಿಸಿದ. ಮಂದಹಾಸ ಬೀರುತ್ತಾ ಸಹಾಯಕ ಶಿಕ್ಷಕ ವ್ಯಾಂಕಿನ್ ಅಲ್ಲಿ ನಿಂತಿದ್ದ.

"ಹೇಯ್ ಮುಠ್ಠಾಳ, ಯಾರೋ ಹೇಳಿದ್ದು ನಾನು ಮಾರ್ಘಾಳಿಗೆ ಮುತ್ತಿಕ್ಕುತ್ತಿದ್ದೆ ಅಂತ? ನಾನು ಅಡುಗೆಯ, ಅದೂ, ವಿಶೇಷವಾಗಿ ಮೀನಿನ ಅಡುಗೆಯನ್ನು ಅಸ್ವಾದಿಸುತ್ತಾ ಸ್ವಲ್ಪ ಜೋರಾಗಿಯೇ ಬಾಯಿ ಚಪ್ಪರಿಸಿದೆ ಅಷ್ಟೇ..."

"ಯಾರಿಗಾದ್ರೂ ಮಕ್ಕಳಿಗೆ ಹೇಳಿ ಮೇಷ್ಟ್ರೇ..." ಎನ್ನುತ್ತಾ ವ್ಯಾಂಕಿನ್ ನಗುತ್ತಾ ಅಲ್ಲಿಂದ ಕಾಲುಕಿತ್ತ.

ಸರ್ಗೆಯ್ ಕಪಿತಾನೊವಿಚ್ ಅಹಿನಿವ್ ಅವರ ಮುಖ ಕೆಂಪು ಕೆಂಪಗಾಯಿತು.

> ಅಹಿನೀವ್‌ಗೆ ಸಿಡಿಲು ಬಡಿದಂತಾಗಿ ಕುಸಿದು ಬೀಳುವುದೊಂದು ಬಾಕಿ. ಹೇಗೋ ಸಂಭಾಳಿಸಿಕೊಂಡು ಮನೆಯ ಕಡೆಗೆ ಹೆಜ್ಜೆ ಹಾಕಿದ. ಎಲ್ಲರೂ ತನ್ನನ್ನು ನೋಡಿ ನಗುತ್ತಿರುವಂತೆ ಭಾಸವಾಯಿತು.

"ಬಡ್ಡಿ ಮಗ ಈಗ ಊರಿಗೆಲ್ಲಾ ಡಂಗುರ ಸಾರಿ ನನ್ನ ಮಾನ ಹರಾಜಾಕುತ್ತಾನೆ." ಅಂದುಕೊಳ್ಳುತ್ತಾ ಮೇಷ್ಟ್ರು ಅವಡುಗಚ್ಚಿದರು.

ಕೊಂಚ ಅಪಧೈರ್ಯದಿಂದಲೇ ಮೇಷ್ಟ್ರು ಹಜಾರಕ್ಕೆ ಹೋಗಿ ವ್ಯಾಂಕಿನನ್ನು ಹುಡುಕತೊಡಗಿದರು.

ವ್ಯಾಂಕಿನ್ ಹಜಾರದ ಮೂಲೆಯೊಂದರಲ್ಲಿದ್ದ ಪಿಯಾನೊ ಪೆಟ್ಟಿಗೆಯ ಬಳಿ ನಿಂತು ಅಲ್ಲೇ ಕುಳಿತುಕೊಂಡಿದ್ದ ಇನ್‌ಸ್ಪೆಕ್ಟರ್‌ನ ಮಡದಿಯ ಕಿವಿಯೊಳಗೆ ಏನೋ ಹೇಳುತ್ತಿದ್ದ. ಅವಳು ಬಾಯಿಗೆ ಕರವಸ್ತ್ರ ಅಡ್ಡ ಹಿಡಿದು ಬಿದ್ದು ಬಿದ್ದು ನಗುತ್ತಿದ್ದಳು.

'ಮೂರು ಕಾಸಿನವನು ನನ್ನ ಬಗ್ಗೆಯೇ ಹೇಳುತ್ತಾ ಇರಬೇಕು. ಅವಳು ನಗ್ತಾ ಇರೋದು ನೋಡಿದ್ರೆ ಖಂಡಿತಾ ಅವನ ಕತೆ ನಂಬಿರಬೇಕು! ಛೆ! ಇದನ್ನು ನಾನು ಹೀಗೇ ಮುಂದುವರೆಯಲು ಬಿಡಬಾರದು. ಅವರನ್ನೆಲ್ಲ ಭೇಟಿಯಾಗಿ ನಿಜ ಸಂಗತಿ ವಿವರಿಸಿ ಹೇಳಬೇಕು. ವ್ಯಾಂಕಿನನ ಧೂರ್ತತನವನ್ನು ಬಯಲುಗೊಳಿಸಬೇಕು.' ಅವರು ತೀರ್ಮಾನಿಸಿದರು.

ಬಹಳ ಮುಜುಗರಪಡುತ್ತಾ ಫ್ರೆಂಚ್ ಭಾಷಾ ಶಿಕ್ಷಕ ಪಾಸ್ಡೆಕೊಯ್ ಅವರ ಬಳಿ ಬಂದರು.

"ಹೀಗೇ ಅಡುಗೆಮನೆಗೆ ಹೋಗಿದ್ದೆ... ನೋಡಬೇಕಲ್ಲಪ್ಪ ಊಟದ ತಯಾರಿ ಹೇಗೆ ನಡೀತಿದೆ ಅಂತ?" ಎಂದು ಪೀಠಿಕೆ ಹಾಕಿದರು. ಮುಂದುವರೆಸಿ, "ನಿನಗೆ ಮೀನು ಅಂದರೆ ಬಹಳ ಇಷ್ಟ ಅಂತ ನನಗೆ ಗೊತ್ತು. ಊಟಕ್ಕೆ ಯಾವ ಮೀನು ಗೊತ್ತಾ?... ಸ್ಟರ್ಜನ್ ಕಣಪ್ಪ ಸ್ಟರ್ಜನ್! ಭರ್ಜರಿ ಮೀನು. ಒಂದೂವರೆ ಗಜಕ್ಕಿಂತ ಕಡಿಮೆ ಉದ್ದವಿಲ್ಲ ಗೊತ್ತ?!... ಹ್ಞ..ಹ್ಞ! ಅಂದ್ಹಾಗೆ... ಮರೆತೇ ಹೋಗಿತ್ತು. ಅಡುಗೆಮನೆಯಲ್ಲಿ ಏನಾಯ್ತು ಗೊತ್ತ? ಅಡುಗೆಯ ಸ್ವಾದಿಷ್ಟ ಕಂಪನ್ನು ಆಘ್ರಾಣಿಸುತ್ತಾ ಆಘ್ರಾಣಿಸುತ್ತಾ ಸ್ಟರ್ಜನ್ ಮೀನನ್ನು ನೋಡಿ ತಡೆಯಲಿಕ್ಕಾಗಲೇ ಇಲ್ಲ. ಕೊಂಚ ಜೋರಾಗಿಯೇ ಬಾಯಿ ಚಪ್ಪರಿಸಿದೆ. ಅದೇ ಹೊತ್ತಿಗೆ ಈ ಮೂರ್ಖ ವ್ಯಾಂಕಿನ್ ಅಲ್ಲಿಗೆ ಬರಬೇಕೇ! ಏನಾಯ್ತು ಗೊತ್ತಾ ಪಾಸ್ಟೆಕೊಯ್?'